ಮೂಲ ದಾವಾ ಸಂಖ್ಯೆ. 21/2022 ಪಿ ಡಬ್ಲ್ಯೂ 1

(ದಿನಾಂಕ 05-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಸಿ ಬಿ ಪಿ ವಕೀಲರಿಂದಃ-

ಈ ದಾವೆಯನ್ನು ನಾನು ಸರ್ವೆ ನಂ.65 ರ ಮೇಲೆ ದಾಖಲಿಸಿದ್ದೇನೆ. ಸದರಿ ಜಮೀನಿನಲ್ಲಿ ನಮಗೆ ಭಾಗ ಬೇಕು ಅಂತಾ ಈ ದಾವೆ ದಾಖಲಿಸಿದ್ದೇನೆ. ದಾವಾಸ್ತಿಯು ಮೂಲತಃ ನನ್ನ ಗಂಡನ ತಂದೆ ಲಕ್ಕಪ್ಪ ಇವರದು ಇರುತ್ತದೆ. ನನಗೆ ಕೊಟ್ರಮ್ಮ ಎನ್ನುವ ಒಬ್ಬಳೇ ಸಹೋದರಿ ಇದ್ದು ಅವಳು ಮರಣ ಹೊಂದಿರುತ್ತಾಳೆ ಅವರಿಗೆ 3 ಜನ ಮಕ್ಕಳು ಅವರೆಂದರೆ ಗಂಗಮ್ಮ, ನಾಗರಾಜ ಮತ್ತು ಹಾಲಮ್ಮ ಇದ್ದು ಅವರಲ್ಲಿ ಹಾಲಮ್ಮ ಮೃತಪಟ್ಟಿರುತ್ತಾರೆ. ನನ್ನ ತವರುಮನೆಗೆ ಸೇರಿದ ಯಾವುದೇ ಆಸ್ತಿಗಳು ಇರುವುದಿಲ್ಲ. ನಾನು ಕೂಲಿ ಕೆಲಸ ಮಾಡುತ್ತಾ ಬಂದಿರುತ್ತೇನೆ.

ನನ್ನ ಭಾಗಕ್ಕೆ ಒಂದು ಪ್ಲಾಟ್ ಬಂದಿತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನಗೆ ಸರ್ಕಾರದವರು ಒಂದು ಪ್ಲಾಟನ್ನು ಕೊಟ್ಟಿರುತ್ತಾರೆನ್ನುತ್ತಾರೆ. ಸರ್ಕಾರದವರು ನನಗೆ ನೀಡಿದ ಪ್ಲಾಟಿನ ಬಗ್ಗೆ ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿದ್ದೇನೆ. ಸದರಿ ಪ್ಲಾಟು ಜಂಟಿ ಕುಟುಂಬದ ಆಸ್ತಿ ಜಂಟಿ ಕುಟುಂಬದ ಪರವಾಗಿ ಅದನ್ನು ಕೊಟ್ಟಿರುತ್ತಾರೆಂದರೆ ಸರಿಯಲ್ಲ. ಜಂಟಿ ಕುಟುಂಬದಲ್ಲಿ ಭಾಗವಾದ ನಂತರ ಸದರಿ ಪ್ಲಾಟು ನನ್ನ ಭಾಗಕ್ಕೆ ಬಂದಿರುತ್ತದೆಂದರೆ ಸರಿಯಲ್ಲ. ಅದನ್ನು ನಾನು ಚೌಟಗಿ ರೇಣುಕಮ್ಮ ಇವರಿಗೆ ಮಾರಾಟ ಮಾಡಿ ಬೇರೆ ಆಸ್ತಿಗಳನ್ನು ಖರೀದಿಸಿರುತ್ತೇನೆಂದರೆ ಸುಳ್ಳು. ಸದರಿ ಪ್ಲಾಟ್ ಮಾರಾಟ ಮಾಡಿದ ಹಣದಿಂದ ಬ್ಯಾಸ್ಗಿದೇರಿ ಗ್ರಾಮದ ಸರ್ವೆ ನಂ.232 ಎಬಿಸಿಡಿ/5 ಎ ರ 4 ಸೆಂಟ್ಸ, ಸರ್ವೆ ನಂ.362/ಬಿ4 ರ 65 ಸೆಂಟ್ಸ ಮತ್ತು ಸರ್ವೆ ನಂ.545/ಬಿ2 ರ ಜಮೀನುಗಳನ್ನು ಖರೀದಿಸಿರುತ್ತೇನೆಂದರೆ ಸರಿಯಲ್ಲ. ಸದರಿ ಆಸ್ತಿಗಳನ್ನು ನಾನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ. ಸದರಿ ಆಸ್ತಿಗಳೂ ಸಹಾ ಜಂಟಿ ಕುಟುಂಬದ ಆಸ್ತಿಗಳಾಗಿರುವುದರಿಂದ ಸದರಿ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಬೇಕಾಗುತ್ತದೆಂದರೆ ಸರಿಯಲ್ಲ. ಚೌಟಗಿ ರೇಣುಕಮ್ಮ ಇವರನ್ನು ಈ ದಾವೆಯಲ್ಲಿ ನಾನು ಸೇರಿಸಿರುವುದಿಲ್ಲ.

ಜಂಟಿ ಕುಟುಂಬದ ಆಸ್ತಿಗಳಲ್ಲಿ ಈಗಾಗಲೇ ವಿಭಾಗವಾಗಿದ್ದು ಸದರಿ ವಿಭಾಗದಲ್ಲಿ ನನಗೆ ಸೈಟು ಬಂದಿದ್ದು ಅದನ್ನು ನಾನು ಮಾರಾಟ ಮಾಡಿಕೊಂಡಿರುತ್ತೇನೆ ನನಗೆ ದಾವಾಸ್ತಿಯಲ್ಲಿ ಈಗ ಯಾವುದೇ ಹಕ್ಕು ಇಲ್ಲವೆಂದರೆ ಸರಿಯಲ್ಲ. ಈಗಾಗಲೇ ವಿಭಾಗದಲ್ಲಿ ಆಸ್ತಿಯನ್ನು ಪಡೆದುಕೊಂಡು ವಿನಾಕಾರಣ ಪ್ರತಿವಾದಿಯರಿಗೆ ತೊಂದರೆ ಕೊಡಲು ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ